# 1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು

## ಎಸ್.ಸಿ. ನಂ.40/2018

P.W: 07
C.W: 10

**ದಿನಾಂಕ 30.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**ಹೆಸರು** : ನವೀನ್ ಕುಮಾರ್

**ತಂದೆಯ ಹೆಸರು :** ಸುರೇಶ್

**ವಯಸ್ಸು** : 45 ವರ್ಷ

**ವೃತ್ತಿ** : ಪೊಲೀಸ್ ಹೆಡ್ ಕಾನ್ಸ್ ಸ್ಟೇಬಲ್

**ವಾಸಸ್ಥಳ** : ಕುಣಿಗಲ್

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

2016 ರಿಂದ 2021 ರವರಿಗೆ ಅಮೃತೂರು ಪೊಲೀಸ್ ಠಾಣೆಯಲ್ಲಿ ಪೊಲೀಸ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2) ದಿ 12-04-17 ರಂದು ರಾತ್ರಿ 12.15 ಗಂಟೆಗೆ ರಾಷ್ಟ್ರೀಯ ಹೆದ್ದಾರಿ -75 , ಹೇಮಾವತಿ ಕ್ರಾಸ್ ಯಾರೋ ಆರೋಪಿಗಳು ರಸ್ತೆಯನ್ನು ಅಡ್ಡಗಟ್ಟಿ ದರೋಡೆ ಮಾಡಲು ಪ್ರಯತ್ನಿಸುತ್ತಿದ್ದಾರೆಂದು ಚಾಸಾ-1 ರವರಿಗೆ ಮಾಹಿತಿ ಬಂದಿದ್ದು , ನಂತರ ಚಾಸಾ-1 ರವರ ಸೂಚನೆಯ ಮೇರೆಗೆ ಇಬ್ಬರು ಪಂಚರನ್ನು ಠಾಣೆಗೆ ಕರೆತಂದು ಚಾಸಾ-1 ರವರೊಂದಿಗೆ ಮತ್ತು

ಇತರೆ ಸಿಬ್ಬಂದಿ ಹಾಗೂ ಪಂಚರೊಂದಿಗೆ ಮಾಹಿತಿ ಬಂದ ಸ್ಥಳವಾದ ಮದೀನ ಹೋಟೇಲ್ ಬಳಿ ಹೋಗಿ ಸ್ವಲ್ಪ ದೂರದಲ್ಲಿ ವಾಹನವನ್ನು ನಿಲ್ಲಿಸಿ ಮರೆಯಿಂದ ನೋಡಲಾಗಿ , ಇಬ್ಬರು ಅಸಾಮಿಗಳು ರಸ್ತೆಯ ಪಕ್ಕದಲ್ಲಿ ನಿಂತಿದ್ದು , ಒಬ್ಬನ ಕೈಯಲ್ಲಿ ಚಾಕು ಹಿಡಿದುಕೊಂಡಿದ್ದು , ರಸ್ತೆಯ ಮೇಲೆ ಬರುತ್ತಿರುವ ವಾಹನ ಮತ್ತು ಸಾರ್ವಜನಿಕರನ್ನು ಅಡ್ಡಹಾಕಿ ದರೋಡೆ ಮಾಡಲು ಪ್ರಯತ್ನಿಸಿರುವಾಗ ,ಚಾಸಾ-1, ನಾನು ಹಾಗೂ ಇತರೆ ಪೊಲೀಸ್ ಸಿಬ್ಬಂದಿಗಳು ಸುತ್ತುವರೆದು 5 ಅಸಾಮಿಗಳನ್ನು ಹಿಡಿದು ಕೊಂಡು ಚಾಸಾ-1 ರವರು ಅಸಾಮಿಗಳನ್ನು ವಿಚಾರಣೆಗೊಳಪಡಿಸಿದಾಗ ಅದರಲ್ಲಿ ಅಸಾಮಿಗಳು ಸುರೇಶ್ ಚಂದ್ರು , ಮುರುಘೇಶ , ಪ್ರದೀಪ್ , ಸಚೀನ್ ಮತ್ತು ಚೇತನ್ ಎಂದು ಹೇಳಿದ್ದು , ಮುಂದುವರೆದು ಅಸಾಮಿಗಳು ಒಬ್ಬಂಟಿಯಾಗಿ ಬರುವ ವ್ಯಕ್ತಿಗಳನ್ನು ಅಡ್ಡಗಟ್ಟಿ ನಿಲ್ಲಿಸಿ ವಡವೆ ಮತ್ತು ಹಣವನ್ನು ದೋಚಿಕೊಳ್ಳಲು ಸಂಚು ಮಾಡುತ್ತಿದ್ದೇವೆಂದು ಒಪ್ಪಿಕೊಂಡಿದ್ದು , ಸುರೇಶ್ ಚಂದ್ರು ರ ಬಳಿ ಒಂದು ಡಿಎಲ್ , ಪಾನ್ ಕಾರ್ಡ್ , ಓಟರ್ ಐಡಿ, ಚಾಕು ಮತ್ತು ಮೊಬೈಲ್ , 100 ರೂ ಹಣ , 10 ರೂನ 3 ನೋಟು ಅಮಾನತ್ತುಪಡಿಸಿಕೊಂಡೆವು. ಮುರುಘೇಶನ ಕಡೆಯಿಂದ ಒಂದು ಚಾಕು, ಪ್ರದೀಪ್ ನ ಕಡೆಯಿಂದ ಡಿ ಎಲ್ , ಮೊಬೈಲ್ , ಸೀಮ್ ಕಾರ್ಡ್ , ಸಚಿನ್ ಕಡೆಯಿಂದ ಒಂದು ಮೊಬೈಲ್ , ಸೀಮ್ ಕಾರ್ಡ್ , ಚೇತನ್ ಕಡೆಯಿಂದ ಮೊಬೈಲ್ ವಶಪಡಿಸಿಕೊಂಡೆವು. ರಾತ್ರಿ 12.15

ರಿಂದ 12.30 ರವರಿಗೆ ಸದರಿ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡು ಪಂಚನಾಮೆ ಮಾಡಿದೆವು. ದಾಳಿ ಪಂಚನಾಮೆಯನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು , ಸಾಕ್ಷಿಯ ಸಹಿಯನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು.

3) ಆರೋಪಿಗಳನ್ನು ಕೂಲುಂಕುಷವಾಗಿ ವಿಚಾರಣೆ ಮಾಡಿದಾಗ ದಿ 21-03-17 ರಂದು ಬೆಂಗಳೂರು -ಮಂಗಳೂರು ರಾಷ್ಟ್ರೀಯ ಹೆದ್ದಾರಿ -75 ರಲ್ಲಿ ಸೋಡಾ ಕಾರಿನ ಚಾಲಕನನ್ನು ಅಡ್ಡ ಹಾಕಿ ,ಎ ಟಿ ಎಂ ಕಾರ್ಡ್ ನ್ನು ತೆಗೆದುಕೊಂಡು ಆತನ ಮೇಲೆ ಹಲ್ಲೆ ಮಾಡಿರುವ ಬಗ್ಗೆ ತಿಳಿಸಿರುತ್ತಾರೆ. ಸ್ಥ.ಳದಲ್ಲಿ ಇದ್ದ ಸಿಫ್ಟ್ ಡಿಸೈನ್ ಕಾರ್ ಮತ್ತು ಕಾರ್ ನ ಒಳಗಡೆ ಇದ್ದ ಟೋಲ್ ಗೇಟ್ ಚೀಟಿಯನ್ನು ಹಾಗೂ ವಶಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸಬಲ್ಲೆ . ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲು 1 ರಿಂದ 5 ನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ . ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ. ಘಟನೆಯ ಕುರಿತು ತನಿಖಾಧಿಕಾರಿಗಳಿಗೆ ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀ ಸವಾಲು ಆರೋಪಿಗಳ ಪರ ಶ್ರೀ ಬಿ ಎನ್ ಆರ್ ವಕೀಲರಿಂದ**

4) ನಾನು ನ್ಯಾಯಾಲಯದ ಮುಂದೆ ನೀಡಿರುವ ಹೇಳಿಕೆ ಕ್ರೈಮ್ ನಂ.60 ಕ್ಕೆ ಸಂಬಂದಪಟ್ಟದ್ದು ಅಂದರೆ ಸರಿಯಲ್ಲ. ಮುಮಾ-1 ರಿಂದ 5 ವಸ್ತುಗಳು ಕ್ರೈಮ್ ನಂಬರ್ 60 ಕ್ಕೆ ಸಂಬಂದಪಟ್ಟಂತೆ ಸೀಸ್ ಮಾಡಿದವು ಅಂದರೆ ಸರಿಯಲ್ಲ. ಕ್ರೈಮ್ ನಂ.60 ಮತ್ತು ಕ್ರೈಮ್ ನಂ.77 ಆರೋಪಿಗಳ ಮೇಲೆ ಕೇಸ್ ಇದೆ ಅಂದರೆ ಸರಿ. ನಾವು ಆರೋಪಿಗಳನ್ನು ಕ್ರೈಮ್ ನಂ.77 ರಲ್ಲಿ ಹಿಡಿದುಕೊಂಡಾಗ ಆಗ ಆರೋಪಿಗಳ ಹೇಳಿಕೆಯ ಮೇರೆಗೆ ಕ್ರೈಮ್ ನಂ.60 ನ್ನು ಸಹ ಸದರಿ ಆರೋಪಿಗಳೇ ಮಾಡಿರುತ್ತಾರೆಂದು ಗೊತ್ತಾಯಿತು. ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲುಗಳನ್ನು ಕ್ರೈಮ್ ನಂ.77 ರಲ್ಲಿ ವಶಪಡಿಸಿಕೊಳ್ಳಲಾಗಿದೆ. ಕ್ರೈಮ್ ನಂ.60 ರಲ್ಲಿ ಯಾವ ಮುದ್ದೆ ಮಾಲುಗಳನ್ನು ಸೀಸ್ ಮಾಡಲಾಗಿದೆ ಎಂದು ನನಗೆ ಗೊತ್ತಿಲ್ಲ. ಕ್ರೈಮ್ ನಂ.60 ರಲ್ಲಿ ನಾನು ಸಹ ಸಾಕ್ಷಿದಾರನಾಗಿ ಸಾಕ್ಷಿ ನುಡಿದಿರುತ್ತೇನೆ.

5) ದಿ 12-04-17 ರಂದು ರಾತ್ರಿ 12.15 ಗಂಟೆಗೆ ನಮ್ಮ ಮೇಲಾಧಿಕಾರಿಗಳಿಗೆ ಮಾಹಿತಿ ಬಂದಿದ್ದು , ನಮಗೆ ಸುಮಾರು 12.20 ಕ್ಕೆ ಮಾಹಿತಿ ನೀಡಿರುತ್ತಾರೆ. ನನಗೆ ಮಾಹಿತಿ ಬಂದ 5 ನಿಮಿಷಕ್ಕೆ ಠಾಣೆಯಬಳಿ ಹೋಗಿರುತ್ತೇನೆ. ಘಟನೆ ಸ್ಥಳಕ್ಕೂ ಮತ್ತು ನಮ್ಮ ಠಾಣೆಗೆ ಸುಮಾರು 4-5 ಕಿಮೀ ಅಂತರವಿರುತ್ತದೆ. ರಾಮಚಂದ್ರೇಗೌಡ ಮತ್ತು ಗಿರಿಗೌಡರವರನ್ನು

ನಾವು ನಮ್ಮ ಮೇಲಾಧಿಕಾರಿಗಳು ನನಗೆ ಫೋನ್ ಮಾಡಿದ ನಂತರ ನಾನು ಅವರಿಗೆ ಕರೆ ಮಾಡಿ ತಿಳಿಸಿ ಕರೆಸಿಕೊಂಡೆನು. ಫೋನ್ ಮಾಡಿ 5 ನಿಮಿಷದ ನಂತರ ಪಂಚರು ಬಂದರು. ಸ್ಥಳಕ್ಕೆ ನಾವೆಲ್ಲರೂ 12.40 ನಿಮಿಷಕ್ಕೆ ತಲುಪಿದ್ದೇವು. ಸುತ್ತುವರೆಯಲು 10 ರಿಂದ 15 ನಿಮಿಷ ಹಿಡಿಯಿತು. ಆರೋಪಿಗಳನ್ನು ಸುಮಾರು 1 ಗಂಟೆ ಸಮಯಕ್ಕೆ ಆಟ್ಯಾಕ್ ಮಾಡಿರುತ್ತೇವೆ . ನಾವು ಸುತ್ತುವರೆದಿದ್ದರಿಂದ ಅವರು ಓಡಲು ಆಗಲಿಲ್ಲ. ಮಹಜರ್ ನ್ನು ಬರೆಯಲು 2.15 ಗಂಟೆಗೆ ಪ್ರಾರಂಭ ಮಾಡಲಾಯಿತು. ಘಟನಾ ಸ್ಥಳದಲ್ಲಿ ಹೈವೇಯಾಗಿದ್ದರಿಂದ ಕರೆಂಟ್ ಇತ್ತು. ಮಹಜರ್ ನಲ್ಲಿ ಆಗಲಿ ಮತ್ತು ನನ್ನ ಹೇಳಿಕೆಯಲ್ಲಿ ಹೈವೇಯಲ್ಲಿ ಕರೆಂಟ್ ಇತ್ತು ಎಂದು ಬರೆದಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಸಚಿನ್ ರವರ ಬಳಿ ಸೀಸ್ ಮಾಡಿದ ಮೊಬೈಲ್ ನಂಬರ್ ಹೇಳಲು ಆಗುವುದಿಲ್ಲ. ಸದರಿ ಮೊಬೈಲ್ ಜಿಯೋ ಕಂಪನಿಯದ್ದು ಆಗಿತ್ತು. ಅವನೇ ಸಚಿನ್ ಎಂದು ಯಾವುದೇ ಗುರುತು ಹಿಡಿದುಕೊಂಡಿರುವುದಿಲ್ಲ. ಸದರಿ ದಿನ ಯಾವುದೇ ದಾಳಿಗೆ ಹೋಗಿರುವುದಿಲ್ಲ ಮತ್ತು ತಮ್ಮ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ , ಆಗಾಗಿ ತಮಗೆ ಯಾವುದೇ ವಿಚಾರ ಸರಿಯಾಗಿ ಗೊತ್ತಿಲ್ಲ ಅಂದರೆ ಸರಿಯಲ್ಲ. ಹಣವನ್ನು ಸುರೇಶ್ ಕಡೆಯಿಂದ ಅಮಾನತ್ತುಪಡಿಸಿಕೊಂಡಿರುತ್ತೇವೆ. ಚಾಕುವನ್ನು ಸುರೇಶ್ ಮತ್ತು ಮುರುಘೇಶ್ ಕಡೆಯಿಂದ ಅಮಾನತ್ತುಪಡಿಸಿಕೊಂಡಿರುತ್ತೇವೆ.

ಆರೋಪಿಗಳು ಯಾವುದೇ ಪ್ರಕರಣದಲ್ಲಿ ಭಾಗಿಯಾಗಿರುವುದಿಲ್ಲ ಮತ್ತು ಅವರಿಂದ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಮತ್ತು ತಮ್ಮಠಾಣೆಯ ಅಂಕೆ-ಸಂಕೆಗೋಸ್ಕರ ಸುಳ್ಳು ಕೇಸು ದಾಖಲು ಮಾಡಿದ್ದೀರಿ ಅಂದರೆ ಸರಿಯಲ್ಲ. ಆರೋಪಿಗಳನ್ನು ಇದೇ ಮೊದಲ ಭಾರಿಗೆ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ ಅಂದರೆ ಸರಿಯಲ್ಲ. ಆರೋಪಿಗಳಿಗೂ ಮತ್ತು ಈ ಕೇಸಿಗೂ ಯಾವುದೇ ಸಂಬದವಿಲ್ಲದಿದ್ದರೂ ಸಹ ಮೇಲಾಧಿಕಾರಿಗಳ ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಅಂದರೆ ಸರಿಯಲ್ಲ.

**ಪಾಟೀ ಸವಾಲು 5 ನೇ ಆರೋಪಿ ಪರ ಶ್ರೀ ಡಿ ಎ ಜೆ ವಕೀಲರಿಂದಃ-**

6) ನಮ್ಮ ಠಾಣೆಯ ವ್ಯಾಪ್ತಿ ನ್ಯಾಷನಲ್ ಹೈವೇ ಗೆ ಬರುತ್ತದೆ.ಅದರಲ್ಲಿ 24 x 7 ಗಾಡಿ ಓಡಾಡುತ್ತಿರುತ್ತದೆ ಅಂದರೆ ಸರಿ. ಸದರಿ ರಸ್ತೆಯಲ್ಲಿ ಓಡಾಡುವ ಯಾವುದೇ ಕಾರಿನಲ್ಲಿ ಕುಳಿತಿರುವ ವ್ಯಕ್ತಿ ಸದರಿ ವಾಹನ ನಿಲ್ಲಿಸದಿದ್ದರೆ ಅದರಲ್ಲಿ ಯಾರು ಕುಳಿತಿದ್ದಾರೆಂದು ಗೊತ್ತಾಗುವುದಿಲ್ಲಅಂದರೆ ಸರಿಯಲ್ಲ. ಆರೋಪಿಗಳು ಯಾವುದೇ ಒಂಟಿ ಗಾಡಿಯನ್ನು ಸಂಚು ಹಾಕಿ ದರೋಡೆ ಮಾಡಲು ಪ್ರಯತ್ನಿಸುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.